# ಕುವೆಂಪು ವಿಶ್ವವಿದ್ಯಾಲಯ

## ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ.

ಜ್ಞಾನಸಹ್ಯಾದ್ರಿ, ಶಂಕರಘಟ್ಟ-577451, ಶಿವಮೊಗ್ಗ, ಕರ್ನಾಟಕ.

Phone No: 08282-256166, mob: 7022254993ಇ-ಮೇಲ್: regexamku@gmail.com, ವೆಬ್‌ಸೈಟ್: www.kuvempu.ac.in


ಸಂಖ್ಯೆ: ಕುವಿ/ಪವಿ/ಪಿಜಿ/ **5851** /2023-24 ದಿನಾಂಕ:06-11-2023.

## ಪ್ರಕಟಣೆ

**ವಿಷಯ: ಡಿಸೆಂಬರ್ - 2023ರಲ್ಲಿ ಜರುಗಲಿರುವ ಸ್ನಾತಕೋತ್ತರ ಡಿಪ್ಲೊಮಾ ಇನ್ ಯೋಗ ಕೋರ್ಸ್‌ನ ಪರೀಕ್ಷೆಗಳಿಗೆ ಅರ್ಜಿ ಆಹ್ವಾನಿಸುವ ಬಗ್ಗೆ.**

**ಉಲ್ಲೇಖ:** ಅಧ್ಯಕ್ಷರು, ಸ್ನಾ. ದೈಹಿಕ ಶಿಕ್ಷಣ ವಿಭಾಗ - ಇವರ ಪತ್ರ ಸಂಖ್ಯೆ: ಕುವಿ:ದೈಶಿವಿ:393: 2023-24. ದಿನಾಂಕ: 06-11-2023

*****

ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಡಿಪ್ಲೊಮಾ ಇನ್ ಯೋಗ ಕೋರ್ಸ್‌ನ ಸೈದ್ಧಾಂತಿಕ ಪರೀಕ್ಷೆಗಳು **ಡಿಸೆಂಬರ್ -2023**ರ ಮಾಹೆಯ ದಿನಾಂಕ:01-12-2023ರಿಂದ ದಿನಾಂಕ: 05-12-2023ರವರೆಗೆ ನಡೆಯಲಿದ್ದು ಪರೀಕ್ಷೆಗೆ ಅರ್ಹರಾದ ಸ್ನಾತಕೋತ್ತರ ಡಿಪ್ಲೊಮಾ ಇನ್ ಯೋಗ ವಿಭಾಗದ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಲಾಜಿಸಿಸ್ ಮುಖಾಂತರ ಪರೀಕ್ಷಾ ಅರ್ಜಿಗಳನ್ನು ಭರ್ತಿ ಮಾಡಿ ನಿಗದಿತ ದಿನಾಂಕದೊಳಗೆ ಶುಲ್ಕ ಸಂದಾಯ ಮಾಡಿ ವಿಭಾಗಾಧ್ಯಕ್ಷರು ಮುಖಾಂತರ ಕುಲಸಚಿವ(ಪರೀಕ್ಷಾಂಗ) ಇವರಿಗೆ ಸಲ್ಲಿಸಲು ತಿಳಿಸಲಾಗಿದೆ.

| **ಪರೀಕ್ಷಾ ಶುಲ್ಕ ಪಾವತಿಸಲು ಮತ್ತು ಅರ್ಜಿ ಸಲ್ಲಿಸಲು ನಿಗದಿಪಡಿಸಲಾದ ದಿನಾಂಕ: 23-11-2023** | | |
|---|---|---|
| ಶುಲ್ಕದ ವಿವರ. | | |
| 1. | ಪರೀಕ್ಷಾ ಶುಲ್ಕ | **ರೂ.1550/-** |
| 2. | ಅಂಕಪಟ್ಟಿ ಶುಲ್ಕ | **ರೂ. 265/-** |
| 3. | ಘಟಿಕೋತ್ಸವ ಶುಲ್ಕ (ಅ)ಸಾಮಾನ್ಯ ವಿದ್ಯಾರ್ಥಿಗಳಿಗೆ.<br>(ಆ)ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ. | **ರೂ. 1045/-**<br>**ರೂ. 905/-** |

ಅಧ್ಯಕ್ಷರು, ಸ್ನಾ. ದೈಹಿಕ ಶಿಕ್ಷಣ ವಿಭಾಗ - ಇವರ ಶಿಫಾರಸ್ಸಿನಂತೆ
**ಪರೀಕ್ಷೆಗಳ ಸೈದ್ಧಾಂತಿಕ ವೇಳಾಪಟ್ಟಿಯು ಈ ಕೆಳಕಂಡಂತಿರುತ್ತದೆ.**

**Time Table PG. Diploma in yoga Examination December-2023**

| Sl. No. | Date / Day | Time | Q. P. Code | Paper |
|---|---|---|---|---|
| 1 | 01-12-2023 Friday | 10.00 AM to 01.00 PM | 75451 | Introduction to Yoga |
| 2 | 02-12-2023 Saturday | 10.00 AM to 01.00 PM | 75452 | Anatomy, Physiology and Yogic Practices |
| 3 | 04-12-2023 Monday | 10.00 AM to 01.00 PM | 75453 | Teaching Methodology |
| 4 | 05-12-2023 Tuesday | 10.00 AM to 01.00 PM | 75454 | Hata Yoga and Gheranda Samhitha |

## *ವಿದ್ಯಾರ್ಥಿಗಳಿಗೆ ಸೂಚನೆ*

1. ವಿದ್ಯಾರ್ಥಿಗಳು online ಮುಖಾಂತರ ಅರ್ಜಿ ಸಲ್ಲಿಸಲು www.kuvempu.ac.in ನಲ್ಲಿ student portalಗೆ login ಆಗಿ ನೊಂದಣಿ ಸಂಖ್ಯೆ, ನಮೂದಿಸಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್/ವಿಷಯಗಳನ್ನು ಗುರುತು ಮಾಡಿದ ನಂತರ ಶುಲ್ಕದ ವಿವರಗಳುಳ್ಳ ಅರ್ಜಿ ಮುದ್ರಿಸಿ ನೆಟ್ ಬ್ಯಾಂಕಿಂಗ್‌ನಲ್ಲಿ ಶುಲ್ಕ ಭರಿಸಿದ ನಂತರ ಪ್ರತಿಯನ್ನು ವಿಭಾಗಕ್ಕೆ ಸಲ್ಲಿಸಬೇಕು.
2. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಯಾವುದೇ ATM (Debit) Card/Credit Card/Online Banking/Paytm wallet ಮೂಲಕ ನೇರವಾಗಿ ಪಾವತಿಸಬಹುದಾಗಿದೆ. ಆನ್‌ಲೈನ್‌ನಲ್ಲಿ ಚಲನ್ ಮುದ್ರಿಸಿಕೊಂಡು ಪಾವತಿಸಿದ ನಂತರ ಸಂಬಂಧಿಸಿದ ಚಲನ್ ಪ್ರತಿ ಮತ್ತು ದಾಖಲಾತಿಗಳನ್ನು ವಿಭಾಗಕ್ಕೆ ಸಲ್ಲಿಸಬೇಕು. ನಿಗದಿಪಡಿಸಿದ ದಿನಾಂಕದ ನಂತರ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

**ವಿಶೇಷ ಸೂಚನೆ:**

**ವಿದ್ಯಾರ್ಥಿಗಳು Internet Browsing Centreನ ಮಾಲೀಕರ ಬ್ಯಾಂಕ್ ಖಾತೆಯ ಮೂಲಕ ವಿಶ್ವವಿದ್ಯಾಲಯಕ್ಕೆ ಶುಲ್ಕ ಪಾವತಿಸಿದಲ್ಲಿ ಉಂಟಾಗುವ ತಾಂತ್ರಿಕ ತೊಂದರೆಗಳಿಗೆ ವಿದ್ಯಾರ್ಥಿಗಳೇ ಜವಾಬ್ದಾರರು.**

- ❖ ಪ್ರವರ್ಗ-1, 2ಎ, 2ಬಿ, 3ಎ, 3ಬಿ ಹಾಗೂ ಇತರೆ ಎಲ್ಲಾ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

3. ವಿದ್ಯಾರ್ಥಿಗಳು ಪರೀಕ್ಷೆ ಕಟ್ಟುವ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರುಪಾವತಿ ಮಾಡುವುದಿಲ್ಲ.
4. ನಿಯಮಾನುಸಾರ ಫಲಿತಾಂಶ ಪ್ರಕಟಗೊಂಡ 10 ದಿನಗಳೊಳಗಾಗಿ ವಿದ್ಯಾರ್ಥಿಗಳು ಸವಾಲಿನ ಮೌಲ್ಯಮಾಪನಕ್ಕೆ ರೂ. 3300/-ಗಳ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

## *ವಿಭಾಗದ ಮುಖ್ಯಸ್ಥರಿಗೆ ಸೂಚನೆಗಳು*

1. **ಪರೀಕ್ಷಾ ಶುಲ್ಕ ಪಾವತಿಸುವ ಮಾಹಿತಿಯು ಪ್ರತಿಯೊಬ್ಬ ವಿದ್ಯಾರ್ಥಿಗೂ ತಲುಪುವಂತೆ ವಿಭಾಗಾಧ್ಯಕ್ಷರು ನಿಗಾ ವಹಿಸತಕ್ಕದ್ದು.**
2. ನಿಯಮಾನುಸಾರ ಅರ್ಹರಾದ ವಿದ್ಯಾರ್ಥಿಗಳಿಂದ ಮಾತ್ರ ಪರೀಕ್ಷಾ ಅರ್ಜಿ ಹಾಗೂ ಪರೀಕ್ಷಾ ಶುಲ್ಕ ಸಂಗ್ರಹಿಸಬೇಕು. ಹಾಗೂ **ಒಂದು ಪ್ರತಿಯನ್ನು ವಿಭಾಗದಲ್ಲಿ ಮಾಹಿತಿಗಾಗಿ ಸಂರಕ್ಷಿಸಿಕೊಳ್ಳುವುದು.**
3. ಹಾಜರಾತಿ ಕೊರತೆ ಇರುವಂತಹ ಹಾಗೂ ಪ್ರವೇಶಾನುಮೋದನೆಯಾಗದ ವಿದ್ಯಾರ್ಥಿಗಳ ಪಟ್ಟಿಯನ್ನು ಪರೀಕ್ಷೆಗಳು ಆರಂಭವಾಗುವ 15 ದಿನ ಮುಂಚಿತವಾಗಿ ವಿಶ್ವವಿದ್ಯಾಲಯಕ್ಕೆ ತಪ್ಪದೇ ಸಲ್ಲಿಸುವುದು. ಒಂದು ವೇಳೆ ಹಾಜರಾತಿ ಕೊರತೆ ಹಾಗೂ ಪ್ರವೇಶಾನುಮೋದನೆಯಾಗದೇ ಇರುವ ವಿದ್ಯಾರ್ಥಿಗಳು ಮುಂದಿನ ಸೆಮಿಸ್ಟರ್‌ಗೆ ಅರ್ಹತೆಯಿಲ್ಲದೆ ಪರೀಕ್ಷಾ ಅರ್ಜಿ ಸಲ್ಲಿಸಿದ್ದಲ್ಲಿ/ಪರೀಕ್ಷೆ ತೆಗೆದುಕೊಂಡಲ್ಲಿ ಮುಂದಿನ ಎಲ್ಲಾ ತರಹದ ತೊಂದರೆಗಳಿಗೆ ವಿಭಾಗದ ಮುಖ್ಯಸ್ಥರೇ ನೇರ ಜವಾಬ್ದಾರರಾಗಿರುತ್ತಾರೆ.
4. ಪ್ರವರ್ಗ-1, 2ಎ, 2ಬಿ, 3ಎ, 3ಬಿ ಹಾಗೂ ಇತರೆ ಎಲ್ಲಾ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.
5. ಶುಲ್ಕ ಪಾವತಿಯ ಕಡೇ ದಿನಾಂಕದ ನಂತರ ಪರೀಕ್ಷಾಂಗ ವಿಭಾಗದಲ್ಲಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಪರಿಶೀಲಿಸಲಾಗುವುದು. ಶುಲ್ಕ ಪಾವತಿ ಸಮರ್ಪಕವಾಗಿ ಕಂಡುಬರದೇ ಇರುವ ಪಕ್ಷದಲ್ಲಿ ಆ ವಿದ್ಯಾರ್ಥಿಯ ಪರೀಕ್ಷಾ ಪ್ರವೇಶ ಪತ್ರವನ್ನು ನೀಡಲಾಗುವುದಿಲ್ಲ.
6. ಸೈದ್ಧಾಂತಿಕ ಪರೀಕ್ಷೆ ನಡೆಸಲು ಬೇಕಾದ ಉತ್ತರ ಪತ್ರಿಕೆ, ಮುದ್ರಿತ ನಮೂನೆಗಳು ಹಾಗೂ ಲೇಖನ ಸಾಮಗ್ರಿಗಳ ಬೇಡಿಕೆ ಪಟ್ಟಿಗಳನ್ನು **ದಿನಾಂಕ: 27-11-2023 ರೊಳಗಾಗಿ ಶಾಖಾಧಿಕಾರಿಗಳು, ಲೆಕ್ಕ ಶಾಖೆ ಪರೀಕ್ಷಾ ವಿಭಾಗ ಇವರಿಗೆ ತಲುಪಿಸಲು ಸೂಚಿಸಿದೆ.**

7. ಪ್ರಶ್ನೆ ಪತ್ರಿಕೆಗಳ ಬೇಡಿಕೆಯನ್ನು ದಿನಾಂಕ: **27-11-2023** ರೊಳಗಾಗಿ ಉಪಕುಲಸಚಿವ (ಪರೀಕ್ಷಾಂಗ) ಇವರಿಗೆ ತಲುಪಿಸಲು ಸೂಚಿಸಿದೆ.
8. ನಿಯಮಾನುಸಾರ ವಿದ್ಯಾರ್ಥಿಗಳಿಂದ ಸಹಿ ಪಡೆದ ಆಂತರಿಕ ಅಂಕಪಟ್ಟಿಗಳನ್ನು ಶಾಲಾ ನಿರ್ದೇಶಕರಿಗೆ ಸಲ್ಲಿಸಿ ಆಂತರಿಕ ಪರಿಶೀಲನಾ ಸಮಿತಿಯ ಅನುಮೋದನೆ ಪಡೆದ ನಂತರ ಆನ್‌ಲೈನ್ ಮೂಲಕ ನಮೂದಿಸಿ **Freeze** ಮಾಡತಕ್ಕದ್ದು. ಆನ್‌ಲೈನ್‌ನಲ್ಲಿ **Freeze** ಮಾಡಿದ ಮುದ್ರಿತ ಪ್ರತಿ ಹಾಗೂ ಶಾಲಾ ನಿರ್ದೇಶಕರಿಂದ ಅನುಮೋದನೆಗೊಂಡ ಪ್ರತಿಗಳನ್ನು ಕುಲಸಚಿವ (ಪರೀಕ್ಷಾಂಗ) ಇವರಿಗೆ ಕಡ್ಡಾಯವಾಗಿ ಸಲ್ಲಿಸುವುದು. ಲಿಖಿತ ಪರೀಕ್ಷೆಗಳು ಪೂರ್ಣಗೊಳ್ಳುವ ಮುಂಚಿತವಾಗಿ **IA** ಅಂಕಗಳನ್ನು **Upload** ಮಾಡುವುದು.
9. ಆಂತರಿಕ ಅಂಕಗಳಿಗೆ ಸಂಬಂಧಿಸಿದಂತೆ, ಯಾವುದೇ ತೊಂದರೆಗಳಿದ್ದಲ್ಲಿ ಅದನ್ನು ಸೈದ್ಧಾಂತಿಕ ಪರೀಕ್ಷೆ ಮುಗಿಯುವ ಒಳಗಾಗಿ ಬಗೆಹರಿಸಿಕೊಳ್ಳಬೇಕು.
10. ಯಾವುದೇ ವಿದ್ಯಾರ್ಥಿಯ ಆಂತರಿಕ ಅಂಕಗಳನ್ನು ನಿಯಮಾನುಸಾರ onlineನಲ್ಲಿ ದಾಖಲಿಸದೇ ಬಿಟ್ಟು ಹೋದಲ್ಲಿ ಅಯಾ ವಿಭಾಗದ ಮುಖ್ಯಸ್ಥರೇ ಜವಾಬ್ದಾರರಾಗಿರುತ್ತಾರೆ.
11. ಸದರಿ ಕೋರ್ಸಿನ ನಿಯಮದ ಪ್ರಕಾರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಲ್ಲದ ವಿದ್ಯಾರ್ಥಿಗಳಿಂದ ಪರೀಕ್ಷೆಗಳಿಗೆ ಅರ್ಜಿಯನ್ನು ಸ್ವೀಕರಿಸಬಾರದು. ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿ ಸ್ವೀಕರಿಸಿದಲ್ಲಿ ಸಂಬಂಧಪಟ್ಟ ವಿಭಾಗದ ಅಧ್ಯಕ್ಷರು ಜವಾಬ್ದಾರರಾಗಿರುತ್ತಾರೆ.
12. ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿರುವಂತಹ (ಕಾಲೇಜು ಮತ್ತು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿ) ವಿಭಾಗದಲ್ಲಿ ಹಾಜರಿಲ್ಲದ ವಿದ್ಯಾರ್ಥಿಗಳು ಕೂಡ ನಿಗದಿತ ಸಮಯದೊಳಗೆ ಪರೀಕ್ಷಾ ಅರ್ಜಿಯನ್ನು ಸಲ್ಲಿಸುವಂತೆ ಸಂಬಂಧಪಟ್ಟ ವಿಭಾಗದ ಅಧ್ಯಕ್ಷರು/ಪ್ರಾಂಶುಪಾಲರ ನಿಗಾ ವಹಿಸತಕ್ಕದ್ದು.
13. ಸ್ನಾತಕ ಪದವಿಯ ಆಂತರಿಕ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಡಿಪ್ಲೊಮಾ ಕೋರ್ಸಿನ ವಿದ್ಯಾರ್ಥಿಗಳ ಆಂತರಿಕ ಪರೀಕ್ಷೆಗಳಿಗೆ ಉಪಯೋಗಿಸಬಾರದು..

6/11/23

ಕುಲಸಚಿವರು(ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ,
ಜ್ಞಾನ ಸಹ್ಯಾದ್ರಿ,
ಶಂಕರಘಟ್ಟ-577 451

ಗೆ,

1. ಮುಖ್ಯಸ್ಥರು, ಪಿ.ಜಿ.ಡಿಪ್ಲೋಮಾ ಇನ್ ಯೋಗ, ದೈಹಿಕ ಶಿಕ್ಷಣ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
2. ಮೆ॥ ಲಾಜಿಸಿಸ್ ಸಂಸ್ಥೆ, ಕಂಪ್ಯೂಟರ್ ವಿಭಾಗ, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

} ಮುಂದಿನ ಸೂಕ್ತ ಕ್ರಮಕ್ಕಾಗಿ

<u>ಪ್ರತಿಗಳು</u> :

1. ಗ್ರಂಥಪಾಲಕರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
2. ಸಂಚಾಲಕರು, ಎಸ್.ಸಿ./ಎಸ್.ಟಿ. ಸೆಲ್/ ಒ.ಬಿ.ಸಿ. ಸೆಲ್, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
3. ಆಪ್ತ ಶಾಖೆ, ಮಾನ್ಯಕುಲಪತಿ, ಕುಲಸಚಿವ(ಆಡಳಿತ), ಕುಲಸಚಿವ (ಪರೀಕ್ಷಾಂಗ) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
4. ಸಹಾಯಕ ಕುಲಸಚಿವರು(ಪ), ರಹಸ್ಯ ವಿಭಾಗ, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5. ಕಛೇರಿ ಪ್ರತಿ.